**ದಿನಾಂಕ: 04/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 1, 3 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ ಪಿ.ಎಂ.ಆರ್. ವಕೀಲರಿಂದ:**

1. ನಿಪಿ.16 ರಲ್ಲಿ ಸರ್ವೆ ನಂಬರ್ 15, ವಿಸ್ತೀರ್ಣ 3 ಎಕರೆ 28 ಗುಂಟೆ ಎಂದು ನಮೂದಾಗಿದೆ. ನಿಪಿ.16 ರಲ್ಲಿ ಸರ್ವೆ ನಂಬರ್ 15, ವಿಸ್ತೀರ್ಣ 1 ಎಕರೆ 25 ಗುಂಟೆ ನಮೂದಾಗಿದೆ ಎಂದರೆ ಸರಿ. ನಾನು ಈ ದಾವೆಯನ್ನು 1 ಎಕರೆ 30 ಗುಂಟೆಗೆ ಸಂಬಂಧಿಸಿದಂತೆ ಹೂಡಿದ್ದೇನೆ. ನಾನು ಹೂಡಿದ ದಾವಾ ವಿಸ್ತೀರ್ಣಕ್ಕೂ ಹಾಗೂ ನಿಪಿ.16 ರಲ್ಲಿ ಕಾಣಿಸಿರುವ ವಿಸ್ತೀರ್ಣಕ್ಕೂ 5 ಗುಂಟೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ.46 ವಿಲ್ ನಲ್ಲಿ ಸರ್ವೆ ನಂಬರ್ 15, ವಿಸ್ತೀರ್ಣ 1 ಎಕರೆ 30 ಗುಂಟೆ ಎಂದು ನಮೂದಿಸಿದ್ದಾರೆ. ನಿಪಿ.46 ರಲ್ಲಿ 1 ಎಕರೆ 30 ಗುಂಟೆ ವಿಸ್ತೀರ್ಣ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ.46 ರಲ್ಲಿ ನನ್ನ ತಂದೆಗೆ ಸಮಾರ್ಧ ಭಾಗ ಇದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ.

2. ನಿಪಿ.47 ರಲ್ಲಿ ಸರ್ವೆ ನಂಬರ್ 15 ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ.47 ಸರ್ವೆ ನಂಬರ್ 16 ಕ್ಕೆ ಸಂಬಂಧಿಸಿದ ದಾಖಲೆ ಎಂದರೆ ಸರಿಯಲ್ಲ. ನಿಪಿ.46 ರಲ್ಲಿ ಸರ್ವೆ ನಂಬರ್ 15 ಕ್ಕೆ ಸಂಬಂಧಿಸಿದಂತೆ ಚಕ್ಕುಬಂದಿ ನಮೂದಿಸಿದ್ದಾರೆ. ನಿಪಿ.46 ರಲ್ಲಿ ಚಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ.46 ಮತ್ತು 47 ಕ್ಕೂ ಹಾಗೂ ದಾವಾಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಘೋಷಣಾತ್ಮಕ ಪರಿಹಾರ ಕೇಳದೇ ಇರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿಯ ಹೆಸರಿನಲ್ಲಿ ಕಾನೂನಾತ್ಮಕ ಖಾತೆ ಇದೆ ಎಂದರೆ ಸರಿಯಲ್ಲ. ಕೊಪ್ಪ ಗ್ರಾಮದ ಜಂಜರ್ ನಂಬರ್ 462, ಪೂರ್ವ-ಪಶ್ಚಿಮ 13 ಅಡಿ, ಉತ್ತರ-ದಕ್ಷಿಣ 96 ಅಡಿ ಸ್ವತ್ತಿಗೆ ನಮಗೆ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇದೆ. ಸದರಿ ಜಂಜರ್ ನಂಬರ್ ಗೆ ನನಗೆ ಹಕ್ಕು, ಸ್ವಾಧೀನ, ಮಾಲೀಕತ್ವ ಇಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲೂ ನನಗೆ ಹಕ್ಕು, ಮಾಲೀಕತ್ವ ಮತ್ತು

ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ಹೂಡಿದ ದಾವೆ ಊರ್ಜಿತವಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 2 ನೇ ಪ್ರತಿವಾದಿ ಗೈರು ಹಾಜರಿದ್ದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**